# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

## ಸಿ.ಸಿ. 320/2014

| | | | |
|---|---|---|---|
| ಸಾಕ್ಷಿದಾರರ ಹೆಸರು | ಬಿ. ಸತೀಶ್ | ಪ್ರಮಾಣ ಮಾಡಿದ ದಿನಾಂಕ | 21.12.2022 |
| ತಂದೆಯ ಹೆಸರು | ಬಸವೇಗೌಡ | | |
| ವಯಸ್ಸು | 51 ವರ್ಷ | | |
| ವೃತ್ತಿ | ವಲಯ ಅರಣ್ಯಾಧಿಕಾರಿಗಳು ಸಾಮಾಜಿಕ ಅರಣ್ಯ ವಲಯ ನಾಗಮಂಗಲ | ಚಾಸಾ | 1 |
| ವಾಸಸ್ಥಳ | ನಾಗಮಂಗಲ | ಪ್ರಾಸಾ | 1 |

## Evidence Before Charge

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

2002 ರಿಂದ 2009 ರವರೆಗೆ ನಾನು ಮದ್ದೂರು ವಲಯದಲ್ಲಿ ವನಪಾಲಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30.11.2008 ರಂದು ಮದುಸ್ದಾರು ವಲಯದ ಬಂಡೀಪುರ ರಾಷ್ಟ್ರೀಯ ಉದ್ಯಾನವನಕ್ಕೆ ಸೇರಿದ ಹುಲಿ ಯೋಜನೆಯಲ್ಲಿ ಬಿದರತಾಳಕಟ್ಟೆ ಗಸ್ತಿನ ಬಂಕೇಗೌಡನಕಟ್ಟೆ ಅರಣ್ಯ ಪ್ರದೇಶದಲ್ಲಿ ನಾವು ಸಿಬ್ಬಂದಿಗಳೊಂದಿಗೆ ರಾಷ್ಟ್ರೀಯ ಹೆದ್ದಾರಿ 212 ರಲ್ಲಿ ಬೆಳಗ್ಗೆ ಸು. 11 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ 2 ರಿಂದ 4 ರವರು ಗಸ್ತು ಮಾಡಿಕೊಂಡು ಹೋಗುತ್ತಿರುವಾಗ ಮುಖ್ಯ ರಸ್ತೆಯಿಂದ ರಸ್ತೆಯ ಬದಿಗೆ ಎಳೆದುಕೊಂಡು ಹೋಗಿರುವ ಎಳಪು ಕಂಡುಬಂತು. ಅದನ್ನು ಹಿಂಬಾಲಿಸಿಕೊಂಡು ಹೋಗಿ ನೋಡಲಾಗಿ ಮಣ್ಣಿನಲ್ಲಿ ರಕ್ತದ ಕಲೆಗಳು

ಬಿದ್ದಿತ್ತು. ಅಲ್ಲಿ ಸುತ್ತ ಮುತ್ತ ಜಾಲಾಡಿ ನೋಡಲಾಗಿ ರಸ್ತೆಯಿಂದ ಸು.10 ಮೀಟರ್ ಅಂತರದಲ್ಲಿ ಕರುಳುಗಳು, ಜಿಂಕೆಯ ತುಂಡಾಗಿರುವ ಎರಡು ಕಾಲುಗಳು ಕಂಡುಬಂದ ಮೇರೆಗೆ ಈ ಸ್ಥಳದಲ್ಲಿ ಯಾವುದೋ ಅವೇಳೆಯಲ್ಲಿ ಶಿಕಾರಿ ಮಾಡಿ ಮಾಂಸವನ್ನು ತೆಗೆದುಕೊಂಡು ಹೋಗಿರುವುದು ಕಂಡುಬಂದಿರುತ್ತದೆ. ನಂತರ ಆಸಾಮಿಗಳು ಯಾರಾದರೂ ಕಂಡುಬರುತ್ತಾರಾ ಎಂದು ನೋಡಲಾಗಿ ಯಾರು ಆಸಾಮಿಗಳು ಕಂಡುಬರಲಿಲ್ಲ. ನಂತರ ನಮ್ಮ ಇಲಾಖೆಯಿಂದ ಕೊಟ್ಟಿರುವ ಡಿಜಿಟಲ್ ಕ್ಯಾಮೆರಾದಿಂದ ಆ ಸ್ಥಳದಲ್ಲಿ ಬಿದ್ದಿದ್ದ ತುಂಡಾಗಿರುವ ಕಾಲುಗಳು, ರಕ್ತದ ಕಲೆಯಾಗಿರುವ ಜಾಗ ಮತ್ತು ಕರುಳು ಬಿದ್ದಿರುವ ಸ್ಥಳದ ಭಾವಚಿತ್ರವನ್ನು ನಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿಯಲಾಗಿರುತ್ತದೆ. ನಂತರ ತುಂಡಾಗಿ ಬಿದ್ದಿದ್ದಂತಹ ಜಿಂಕೆ ಕಾಲುಗಳನ್ನು ವಶಕ್ಕೆ ಪಡೆದು ಮಹಜರ್ ಮಾಡಿರುತ್ತೇವೆ. ಮಹಜರನ್ನು ನಾನು ಮತ್ತು ಸಿಬ್ಬಂದಿಗಳಾದ ಚಾಸಾ 2 ಮತ್ತು 4 ರವರ ಸಮಕ್ಷಮ ಮಾಡಿರುತ್ತೇವೆ. ಸ್ಥಳದಲ್ಲಿ ಚೆಕ್ಕುಬಂದಿಯನ್ನು ಬರೆದಿರುತ್ತೇವೆ. ಮಹಜರನ್ನು ಮ. 12.45 ರಿಂದ 1.30 ರವರೆಗೆ ಮಾಡಿರುತ್ತೇವೆ.

ನಂತರ ಕಛೇರಿಗೆ ಬಂದು ವಲಯ ಅರಣ್ಯಾಧಿಕಾರಿಗಳಿಗೆ ಮೌಖಿಕವಾಗಿ ವರದಿ ಮಾಡಿರುತ್ತೇವೆ. ಸಾಕ್ಷಿಯು ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರ್ತಿಸಿದ್ದು ಮಹಜರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರ್ತಿಸಲಾಯಿತು. ನಂತರ ಸಂಜೆ ಸು. 6-7 ಗಂಟೆಯಲ್ಲಿ ಆರೋಪಿಗಳೊಂದಿಗೆ ಕೇರಳ ರಾಜ್ಯದ ಅರಣ್ಯ ಇಲಾಖೆಯವರು ನಮ್ಮ ಕಛೇರಿಗೆ ಬಂದಿರುತ್ತಾರೆ. ನಂತರ ಆರೋಪಿಗಳು ಕೃತ್ಯವನ್ನು ನಮ್ಮ ವಲಯದಲ್ಲಿ ಮಾಡಿ ಕೇರಳ ರಾಜ್ಯದಲ್ಲಿ ಸೆರೆ ಸಿಕ್ಕಿರುತ್ತಾರೆ ಎಂಬ ಬಗ್ಗೆ ವರದಿ ಮಾಡಿರುತ್ತಾರೆ. ಅದೇ ದಿನ ಸಂಜೆ ಕೇರಳ ರಾಜ್ಯದ ಸಹಾಯಕ ವನಪಾಲಕರಾದ ಸಿ.ಟಿ.ಜೋಜು ಆರೋಪಿಗಳೊಂದಿಗೆ ಬಂದು ಆರೋಪಿಗಳು ಅವರು ಮಾಡಿದ ದಾಳಿಯಲ್ಲಿ ನಮ್ಮ ವಲಯದಲ್ಲಿ ಮಾಡಿದಂತಹ ಜಿಂಕೆಯ ಭೇಟೆಯ 35 ಕೆ.ಜಿ ಮಾಂಸವನ್ನು ಹಂಚಿಕೆ ಮಾಡಿಕೊಳ್ಳಲು ತಯಾರು ಮಾಡಿಕೊಂಡಾಗ ದಾಳಿ ಮಾಡಿದಾಗ ಅವರು ನಮ್ಮ ವಲಯದಲ್ಲಿ ಜಿಂಕೆಯನ್ನು ಭೇಟೆಯಾಡಿರುತ್ತಾರೆ ಎಂಬ ಬಗ್ಗೆ ಆರೋಪಿಗಳನ್ನು ಕರೆದುಕೊಂಡು ಬಂದು ಸ್ಥಳ ಮಹಜರ್ ಮಾಡಲು ಕೇಳಿರುತ್ತಾರೆ. ಈ ಬಗ್ಗೆ ನಮಗೆ ಒಂದು ಪತ್ರವನ್ನೂ ನೀಡಿರುತ್ತಾರೆ. ಸಾಕ್ಷಿಯು ಸದರಿ ಪತ್ರವನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 2 ಎಂದು ಗುರ್ತಿಸಲಾಯಿತು. ನಿಪಿ 2 ರಂತೆ ಆರೋಪಿಗಳಿಂದ ಒಂದು ಅಂಬಾಸಿಡರ್ ಕಾರ್,

ಒಂದು ಕಂಟ್ರಿ ಗನ್, ಮತ್ತು ಗನ್ ಗೆ ಉಪಯೋಗಿಸುವ ಕಾಟ್ರೈಜೆಸ್ ಮತ್ತು ರಕ್ತದ ಕಲೆಯಿರುವ ಚಾಕು, ಜಿಂಕೆ ಚರ್ಮ, 35 ಕೆ.ಜಿ ಮಾಂಸ, ತಕ್ಕಡಿ ಮತ್ತು ಬಟ್ಟುಗಳನ್ನು, ಮಾಂಸ ಕಟ್ ಮಾಡುವ ದೊಡ್ಡಕತ್ತಿ, ಸಣ್ಣ ಕತ್ತಿ, ಎರಡು ಟಾರ್ಚ್ , ಮಾಂಸವನ್ನು ಶೇಖರಿಸಿಡುವ ಪ್ಲಾಸ್ಟಿಕ್ ಚೀಲವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ ಎಂದು ಹೇಳಿರುತ್ತಾರೆ. ನಂತರ ಆರೋಪಿಗಳನ್ನು ಸಹಾ ತೋರಿಸಿರುತ್ತಾರೆ. ಆ ವೇಳೆಯಲ್ಲಿ ಆರೋಪಿಗಳಾದ ಅಬ್ದುಲ್ ರೆಹಮಾನ್, ಮೊಹಮ್ಮದ್ ಕುಟ್ಟಿ ಅಬ್ದುಲ್ ಮಜೀದ್, ರವರನ್ನು ತೋರಿಸಿರುತ್ತಾರೆ. ಇನ್ನಿಬ್ಬರು ಇದ್ದರು, ಅವರನ್ನು ದಸ್ತಗಿರಿ ಮಾಡಿರಲಿಲ್ಲ. ಈ ಬಗ್ಗೆ ಮಹಜರ್ ಮಾಡಿರುವ ಕಾಪಿಯನ್ನು ನನಗೆ ತೋರಿಸಿರುತ್ತಾರೆ.

(ಕೇರಳ ರಾಜ್ಯದ ಮಹಜರ್ ಕಡತದಲ್ಲಿ ಇದ್ದು ಆದರೆ ಅದರ ತರ್ಜುಮೆ ಕಾಪಿ ಇಲ್ಲದ ಕಾರಣ ಮಾನ್ಯ ಸಹಾಯಕ ಅಭಿಯೋಜಕರು ಸಮಯಾವಕಾಶ ಕೋರಿರುತ್ತಾರೆ).

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ